# 73ನೇ ಸಂವಿಧಾನ ತಿದ್ದುಪಡಿಯ 25ನೇ ವರ್ಷಾಚರಣೆ

## ಪಂಚಾಯತ್ ರಾಜ್ ಬಲವರ್ಧನೆ: ಅನುಷ್ಠಾನದ ಸವಾಲುಗಳು



**ಸಾಣೂರು ನರಸಿಂಹ ಕಾಮತ್**
**ಮಾಜಿ ಅಧ್ಯಕ್ಷರು ಸಾಣೂರು ಗ್ರಾಮ ಪಂಚಾಯತ್**
**ಆಡಳಿತ ಮಂಡಳಿ ಸದಸ್ಯರು, ಕರ್ನಾಟಕ ಪಂಚಾಯತ್ ರಾಜ್ ಪರಿಷತ್ (ರಿ), ಬೆಂಗಳೂರು**

ಪಂಚಾಯತ್ ರಾಜ್ ವ್ಯವಸ್ಥೆಯು ಪ್ರಜಾಪ್ರಭುತ್ವದ ಬುನಾದಿಯಾಗಿದೆ. ದೇಶದಲ್ಲೇ ಪಂಚಾಯತ್ ರಾಜ್ ವ್ಯವಸ್ಥೆಯು ಸಂವಿಧಾನದ 73ನೆ ತಿದ್ದುಪಡಿಯನ್ವಯ ಜಾರಿಗೆ ಬಂದು 25 ವರ್ಷಗಳಾಯಿತು. ಕರ್ನಾಟಕದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯು ಸಂವಿಧಾನದ 73ನೆ ತಿದ್ದುಪಡಿಗಿಂತಲೂ ಮುಂಚಿತವಾಗಿ ಬೇರು ಬಿಟ್ಟಿರುವುದು ನಮಗೆಲ್ಲರಿಗೂ ತಿಳಿದ ವಿಚಾರ.

1987 ರಿಂದ 1992ರ ಅವಧಿಯಲ್ಲಿ ಕರ್ನಾಟಕದಲ್ಲಿ ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ವ್ಯವಸ್ಥೆ ಜಾರಿಯಲ್ಲಿತ್ತು. ಎರಡು ಹಂತಗಳ ಈ ವ್ಯವಸ್ಥೆ ಅಧಿಕಾರ ವಿಕೇಂದ್ರೀಕರಣದ ದಾರಿಯಲ್ಲಿ ದೇಶಕ್ಕೇ ಮಾದರಿಯಾಗಿತ್ತು. ಇದನ್ನು ಗಮನಿಸಿ ದೇಶದ ಸಂವಿಧಾನಕ್ಕೆ 73ನೆ ತಿದ್ದುಪಡಿಯನ್ನು ಅಳವಡಿಸಿಕೊಂಡ ಮೊದಲ ರಾಜ್ಯ ಎನ್ನುವ ಹೆಗ್ಗಳಿಕೆ ಹೊಂದಿದೆ. ಸಂವಿಧಾನದ 73ನೆ ತಿದ್ದುಪಡಿಗೆ ಅನುಗುಣವಾಗಿ ಸಿದ್ಧಪಡಿಸಲಾದ ನೂತನ ಮಸೂದೆಯನ್ನು 1993ರ ಏಪ್ರಿಲ್ 1ರಂದು ಶಾಸನ ಸಭೆಯಲ್ಲಿ ಮಂಡಿಸಲಾಯಿತು. ಸಾಕಷ್ಟು ಚರ್ಚೆಯ ನಂತರ ಎರಡೂ ಸದನಗಳು ಈ ಮಸೂದೆಗೆ ಅನುಮೋದನೆ ನೀಡಿದವು. ಏಪ್ರಿಲ್ 13ರಂದು ರಾಜ್ಯಪಾಲರ ಸಹಿಯನ್ನು ಪಡೆಯಲಾಯಿತು. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಅದೇ ವರ್ಷದ ಮೇ 10 ರಿಂದ ಅನುಷ್ಠಾನಕ್ಕೆ ಬಂದಿತು.

ಈ ಮಸೂದೆ ಅನುಷ್ಠಾನಗೊಂಡ 22 ವರ್ಷಗಳ ನಂತರ ಇದೀಗ ಸಮಗ್ರ ತಿದ್ದುಪಡಿಗಳೊಂದಿಗೆ ಹೊಸ ರೂಪವನ್ನು ಪಡೆದಿರುವ "ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ಅಧಿನಿಯಮ –2015ಕ್ಕೆ ರಾಜ್ಯಪಾಲರು 18–12–2015 ರಂದು ಅನುಮೋದಿಸುತ್ತಾರೆ. ಈ ಅಧಿನಿಯಮವು 31–12–2015 ರಂದು ರಾಜ್ಯಪತ್ರದಲ್ಲಿ ಪ್ರಕಟಗೊಂಡಿದ್ದು, ಶಾಸನವಾಗಿ 25–02–2016ರಿಂದ ಕಾರ್ಯರೂಪಕ್ಕೆ ಬಂದಿದೆ. ಮೂಲ ಅಧಿನಿಯಮ (ಕೆ.ಪಿ.ಆರ್ ಅಧಿನಿಯಮ 1993) ಕ್ಕೆ ಸಮಗ್ರವಾದ ತಿದ್ದುಪಡಿಗಳನ್ನು ತರುವ ಮೂಲಕ ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆಯನ್ನು ಇನ್ನಷ್ಟು ಭದ್ರಗೊಳಿಸುವ ಪ್ರಯತ್ನವನ್ನು ಮಾಡಲಾಗಿದೆ.

ಗ್ರಾಮ ಪಂಚಾಯತ್ ಒಂದು ಪ್ರಜಾತಂತ್ರೀಯ ವ್ಯವಸ್ಥೆ. ಅದರ ನಿರ್ವಹಣೆಯನ್ನು ಜನರಿಂದ ಆಯ್ಕೆಯಾಗುವ ಪ್ರತಿನಿಧಿಗಳು ಮತ್ತು ನಿಯಮಾನುಸಾರ ನೇಮಕಗೊಳ್ಳುವ ಅಧಿಕಾರಿಗಳು, ಸಿಬ್ಬಂದಿಗಳು ಸೇರಿ ನಡೆಸಬೇಕು. ಇದರ ಉದ್ದೇಶ ಆಡಳಿತದ ಸುಗಮ ನಿರ್ವಹಣೆ ಮತ್ತು ಹೆಚ್ಚಿನ ಅಭಿವೃದ್ಧಿ ಸಾಧನೆ. ಇವುಗಳನ್ನು ಕಾಯಿದೆ ನಿಯಮಾವಳಿ ಮತ್ತು ಸರ್ಕಾರ ಕಾಲಕಾಲಕ್ಕೆ ರೂಪಿಸುವ ಧೋರಣೆ ಮತ್ತು ಮಾರ್ಗದರ್ಶಿ ಸೂತ್ರಗಳಿಗೆ ಅನುಗುಣವಾಗಿ ನಡೆಸಬೇಕು.

ಅಧಿಕಾರ ವಿಕೇಂದ್ರೀಕರಣ ಎಂದರೆ ಒಬ್ಬರ ಅಧಿಕಾರ ಕಿತ್ತು ಮತ್ತೊಬ್ಬರಿಗೆ ನೀಡುವುದಲ್ಲ. ಬದಲಾಗಿ ಬೇರೊಬ್ಬರ ಅಧಿಕಾರ ಕಿತ್ತುಕೊಂಡು ಮತ್ತೊಬ್ಬರು ನಡೆಸುವುದೂ ಅಲ್ಲ. ಎಲ್ಲರೂ ತಮ್ಮ–ತಮ್ಮ ಕರ್ತವ್ಯ ಅರಿತು ಸಮುದಾಯ ಪ್ರಜ್ಞೆಯಿಂದ ಕಾರ್ಯನಿರ್ವಹಿಸುವುದು ಎಂದರ್ಥ. ಈ ರೀತಿಯ ವಾತಾವರಣ ವ್ಯಾಪಕಗೊಂಡರೆ ಯಾರೂ ಕೀಳಲ್ಲ. ಯಾರೂ ಮೇಲಲ್ಲ. ಎಲ್ಲರಿಗೂ ಅವರದ್ದೇ ಆದ ಅಧಿಕಾರ ಮತ್ತು ಕರ್ತವ್ಯಗಳೇ ಮುಖ್ಯ.

ಪಂಚಾಯತ್ ರಾಜ್ ವ್ಯವಸ್ಥೆ ಬಲಗೊಂಡರೆ ತಮ್ಮ ಅಧಿಕಾರಕ್ಕೆ ಎಲ್ಲಿ ಸಂಚಕಾರ ಬಂದಿತೋ ಎನ್ನುವ ಅಳುಕು ಪಕ್ಷಾತೀತವಾಗಿ ಎಲ್ಲಾ ಮಂತ್ರಿಗಳು ಮತ್ತು ಶಾಸಕರ ಮನಸ್ಸಿನಲ್ಲಿದೆ. ಎಷ್ಟೋ ಬಾರಿ ಶಾಸಕರು ಪಂಚಾಯತ್ ರಾಜ್ ಸಂಸ್ಥೆಗಳ ಸಭೆಯಲ್ಲಿ ಹಾಜರಾಗುವುದೇ ಇಲ್ಲ. ಹಾಜರಾದರೂ ಸಕ್ರಿಯವಾಗಿ ಭಾಗವಹಿಸದೆ ಅಸಡ್ಡೆಯನ್ನು ತೋರುವುದೇ ಜಾಸ್ತಿ. ಈ ಸಂಸ್ಥೆಗಳ ಸಮಸ್ಯೆಗಳನ್ನು ವಿಧಾನಮಂಡಲದ ಅಧಿವೇಶನಗಳಲ್ಲಿ ಎತ್ತಿ ಸರಕಾರದ ಗಮನ ಸೆಳೆದು ತಮ್ಮ ಉಪಯುಕ್ತತೆಯನ್ನು ತೋರಿಸಿಲ್ಲ. ಅದರ ಬದಲು ಅವಕಾಶ ಸಿಕ್ಕಾಗಲೆಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳನ್ನು ಹೀಗಳೆದು ಅವರಿಗೆ ಕೊಟ್ಟಿರುವ ಅಧಿಕಾರವನ್ನು ಹಿಂಪಡೆಯುವ ಬಗ್ಗೆಯೇ ಮಾತನಾಡುತ್ತಾರೆ.

ರಾಜ್ಯದ ಮೊದಲ ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಮಂತ್ರಿಗಳಾದ ದಿವಂಗತ ನಜೀರ್‌ಸಾಬ್‌ರನ್ನು ಬಿಟ್ಟರೆ ಆ ಬಳಿಕದ ಯಾವ ಮಂತ್ರಿಗಳೂ ಪಂಚಾಯತ್ ರಾಜ್ ಸಂಸ್ಥೆಗಳ ಮಿತ್ರ, ಮಾರ್ಗದರ್ಶಕ ಮತ್ತು ತತ್ವಜ್ಞಾನಿಯ ಪಾತ್ರವಹಿಸಲಿಲ್ಲ.

ದಿವಂಗತ ಎಂ.ವೈ.ಘೋರ್ಪಡೆಯವರಿಗೆ ಪಂಚಾಯತ್ ರಾಜ್ ವ್ಯವಸ್ಥೆಯ ಬಗ್ಗೆ ಹೆಚ್ಚಿನ ಸದಾಶಯ, ಸಹಾನೂಭೂತಿಗಳಿದ್ದರೂ ಅವರ ಲಕ್ಷವೆಲ್ಲಾ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಬೆಳೆಯುವ ಪಂಚಾಯತ್ ರಾಜ್ ವ್ಯವಸ್ಥೆ ಇತ್ತೇ ಹೊರತು ಪ್ರಜೆಗಳ ಸಹಭಾಗಿತ್ವದಿಂದ ಬೆಳೆಯುವಂತಹ ವ್ಯವಸ್ಥೆಯಲ್ಲ. ರಾಜ್ಯದ ಆಡಳಿತಾರೂಢ ಪಕ್ಷವಾಗಲೀ ಬೇರೆ ಯಾವುದೇ ಪಕ್ಷವಾಗಲೀ, ಎಲ್ಲಾ ರಾಜಕೀಯ ಪಕ್ಷಗಳು ಇದರಲ್ಲಿ ನಿರಾಸಕ್ತರಾಗಿರುವುದು ರಹಸ್ಯವಾಗಿಲ್ಲ.

ತ್ರಿಸ್ಥರ ಪಂಚಾಯತ್ ರಾಜ್ ವ್ಯವಸ್ಥೆಯ ಜನಪ್ರತಿನಿಧಿಗಳಿಂದ ಆಯ್ಕೆಗೊಂಡ ಹೆಚ್ಚಿನ ವಿಧಾನಪರಿಷತ್ತಿನ ಸದಸ್ಯರಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಬಲವರ್ಧನೆ ಬಗ್ಗೆ ತೀವ್ರ ಆಸಕ್ತಿ ಮತ್ತು ಕಳಕಳಿ ತೋರುತ್ತಿಲ್ಲ. ಈ ಬಗ್ಗೆ ಆಳವಾದ ಅಧ್ಯಯನ ಮತ್ತು ನಿರಂತರ ಸಂಪರ್ಕದಿಂದ ವಿಧಾನಪರಿಷತ್ತಿನಲ್ಲಿ ವಿಕೇಂದ್ರೀಕರಣ ವ್ಯವಸ್ಥೆಯ ಬಗ್ಗೆ ಗಟ್ಟಿ ಧ್ವನಿ ಕೇಳಿ ಬರುತ್ತಿರುವುದು ಕೇವಲ ಬೆರಳಣಿಕೆಯಷ್ಟು ಮಾತ್ರ.

ಇತ್ತೀಚೆಗೆ ರಾಜ್ಯ ವಿಧಾನ ಪರಿಷತ್ ಸದಸ್ಯರಾದ ಕೋಟಾ ಶ್ರೀನಿವಾಸ ಪೂಜಾರಿಯವರ ನೇತೃತ್ವದಲ್ಲಿ ಒಂದಷ್ಟು ಶಾಸಕರು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ 'ಫಂಕ್ಷನ್, ಫಂಕ್ಷನರಿ, ಫಂಡ್ಸ್' ವರ್ಗಾವಣೆಗಾಗಿ ಬೇಡಿಕೆಯೊಡ್ಡಿ ವಿಧಾನಸೌಧದ



ಗಾಂಧಿ ಪ್ರತಿಮೆಯಡಿ ಧರಣಿ ಕೂತು ಆಗ್ರಹಿಸಿರುವುದನ್ನು ಬಿಟ್ಟರೆ, ಅಲ್ಲಲ್ಲಿ ಚರ್ಚೆಗಳು, ಪ್ರಶ್ನೆಗಳು ನಡೆಯುತ್ತವೆಯೇ ವಿನಃ ಪಂಚಾಯತ್ ರಾಜ್ ವ್ಯವಸ್ಥೆಯ ಬಗ್ಗೆ ಗಟ್ಟಿಯಾಗಿ ಧ್ವನಿ ಎತ್ತುತ್ತಿರುವುದು ತುಂಬಾ ವಿರಳ.

ಸಂವಿಧಾನದ 73ನೆ ತಿದ್ದುಪಡಿಯನ್ವಯ ದೇಶದಲ್ಲಿ ರೂಪುಗೊಂಡ ಪಂಚಾಯತ್ ರಾಜ್ ಅಧಿನಿಯಮದನ್ವಯ ಪಂಚಾಯತ್‌ಗಳು ಗ್ರಾಮ ಸರ್ಕಾರಗಳಾಗಿ, ಸ್ವತಂತ್ರವಾಗಿ ಕಾರ್ಯನಿರ್ವಹಿಸುವ ವಾತಾವರಣ ಸೃಷ್ಟಿಯಾಗಬೇಕಿತ್ತು. ಕಾಯ್ದೆ ಅನುಷ್ಠಾನಗೊಂಡ 25ನೆ ವರ್ಷಗಳ ಬಳಿಕವೂ ಪಂಚಾಯತ್ ರಾಜ್ ವ್ಯವಸ್ಥೆ ಪೂರ್ಣ ಪ್ರಮಾಣದಲ್ಲಿ ಬಲವರ್ಧನೆಗೊಳ್ಳದೆ, ಕಾಯ್ದೆಗೆ ವ್ಯತಿರಿಕ್ತವಾದ ಸುತ್ತೋಲೆಗಳ ಆಡಳಿತದಿಂದಾಗಿ ದಿನೇ ದಿನೇ ದುರ್ಬಲಗೊಳ್ಳುತ್ತಿದೆ.

ಗ್ರಾಮ ಪಂಚಾಯತ್‌ಗಳು ಸ್ವತಂತ್ರ ಗ್ರಾಮ ಸರ್ಕಾರಗಳಂತೆ ಕೆಲಸ ಮಾಡಬೇಕಿದ್ದರೆ ಅವುಗಳಿಗೆ 3ಎಫ್‌ಗಳು ('ಫಂಕ್ಷನ್, ಫಂಕ್ಷನರಿ, ಫಂಡ್ಸ್') ಸರಿಯಾಗಿ ವರ್ಗಾವಣೆಯಾಗಿಲ್ಲ ಎಂಬ ಕೊರಗು ಸ್ಥಳೀಯಾಡಳಿತದ ಜನಪ್ರತಿನಿಧಿಗಳನ್ನು ಕಾಡುತ್ತಿದೆ. ಕಾಯಿದೆಯಲ್ಲಿ ಹೇಳಿರುವಂತೆ ಈ 3ಎಫ್‌ಗಳ ವರ್ಗಾವಣೆಯಾಗಿಲ್ಲ. ಆರೋಗ್ಯ ಇಲಾಖೆಯ ಸರ್ಕಾರಿ ಆಸ್ಪತ್ರೆ, ಅಂಗನವಾಡಿ, ಪ್ರಾಥಮಿಕ ಶಾಲೆಗಳು, ಗ್ರಂಥಾಲಯ, ಪಡಿತರ ವ್ಯವಸ್ಥೆಗಳು ಸೇರಿದಂತೆ 29 ವಿಷಯಗಳನ್ನೊಳಗೊಂಡ ಕಾರ್ಯಕ್ರಮಗಳ ವರ್ಗಾವಣೆ, ಅದಕ್ಕೆ ಸಂಬಂಧಿಸಿದ ಕಾರ್ಯನಿರ್ವಾಹಕರು, ಹಣಕಾಸು ಪಂಚಾಯತ್‌ಗಳಿಗೆ ಇನ್ನೂ ಬಂದಿಲ್ಲ.

ನಜೀರ್‌ಸಾಬ್ ಕಲ್ಪನೆಯಲ್ಲಿ ಗ್ರಾಮ ಸಭೆ 'ಹಳ್ಳಿಯ ವಿಧಾನಸಭೆ' ಎಂದೇ ಬಿಂಬಿತವಾಗಿತ್ತು. ಬಡವರಿಗೆ ಮನೆಗಳ ಹಂಚಿಕೆ ಮತ್ತು ಆಯ್ಕೆ ಪ್ರಕ್ರಿಯೆ ಗ್ರಾಮ ಸಭೆಯಲ್ಲಿಯೇ ನಡೆಯಬೇಕು ಎಂದು 73ನೆ ತಿದ್ದುಪಡಿ ಸ್ಪಷ್ಟಪಡಿಸಿದ್ದು, ಗ್ರಾಮ ಸ್ವರಾಜ್ ಕಾಯ್ದೆಯಲ್ಲಿ ಎಲ್ಲಾ ಕಾರ್ಯಕ್ರಮಗಳ ವೈಯಕ್ತಿಕ ಫಲಾನುಭವಿಗಳ ಆಯ್ಕೆ ಗ್ರಾಮ ಸಭೆಯಲ್ಲಿಯೇ ಎಂದು ಸ್ಪಷ್ಟವಾಗಿ ಉಲ್ಲೇಖಗಳಿದ್ದರೂ, ಗ್ರಾಮ ಸಭೆಗಳ ಮೂಲಕ ಬಡವರ ಮನೆಯನ್ನು ಆಯ್ಕೆ ಮಾಡುವುದು ಬಿಟ್ಟರೆ (ಅದೂ ಸಹ ಪ್ರಕ್ರಿಯನ್ನು ಹೊರತು ಪಡಿಸಿ, ಕೆಲವೆಡೆ ಮಾತ್ರ ನಡೆಯುತ್ತದೆ) ಫಲಾನುಭವಿಗಳ ಪಟ್ಟಿಯನ್ನು ಇಲಾಖೆ ಅನ್ಯ ಮೂಲಗಳಿಂದ ಪಡೆಯುತ್ತಿದೆ. ಸರ್ಕಾರ ಘೋಷಿಸಿದ ಹೆಚ್ಚಿನ ಎಲ್ಲಾ ಸವಲತ್ತುಗಳು ವಿವಿಧ ಇಲಾಖೆಗಳ ಮೂಲಕವೇ ಜನರಿಗೆ ಸಿಗುವ ವ್ಯವಸ್ಥೆಯಲ್ಲಿರುವಾಗ, ಗ್ರಾಮ ಸಭೆಗಳಲ್ಲಿ ಇಲಾಖಾಧಿಕಾರಿಗಳು ಕಾಟಾಚಾರಕ್ಕಾಗಿ ಭಾಗವಹಿಸುವಂತಾಗಿ ಗ್ರಾಮ ಸಭೆಗಳು ಮಹತ್ವವನ್ನೇ ಕಳೆದುಕೊಳ್ಳುತ್ತಿದೆ.

ಪಂಚಾಯತ್ ರಾಜ್ ವ್ಯವಸ್ಥೆ ಸಬಲೀಕರಣಗೊಳ್ಳಬೇಕಾದರೆ, ಪೂರಕ ಸಿಬ್ಬಂದಿಗಳ ನೇಮಕಾತಿಯ ಅಗತ್ಯವಿದೆ. ರಾಜ್ಯದಲ್ಲಿ 1800ಕ್ಕೂ ಮಿಕ್ಕಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಕಾರ್ಯದರ್ಶಿ ಹುದ್ದೆ ನೇಮಕಾತಿ ಪ್ರಕ್ರಿಯೆ ಮುಗಿಸಿ ಒಂದೂವರೆ ವರ್ಷ ಸಂದರೂ ಆಯ್ಕೆ ಪಟ್ಟಿಯನ್ನು ಸರ್ಕಾರ ಪ್ರಕಟಿಸಿಲ್ಲ. ಗ್ರಾಮೀಣಾಭಿವೃದ್ಧಿ ಮತ್ತು ಲೆಕ್ಕಸಹಾಯಕರ ಹುದ್ದೆಗಳು ಭರ್ತಿಯಾಗದೇ ಸಂಪೂರ್ಣ ಪಂಚಾಯತ್ ರಾಜ್ ವ್ಯವಸ್ಥೆ ಕ್ಷೀಣಗೊಂಡಿದೆ.

ಸಂವಿಧಾನದ 73ನೆ ತಿದ್ದುಪಡಿಯ ಆಶಯಕ್ಕೆ ಅನುಗುಣವಾಗಿ ಹಾಗೂ 2016ರಲ್ಲಿ ಜಾರಿಗೆ ಬಂದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆಯನ್ವಯ ಪಂಚಾಯತ್ ರಾಜ್ ವ್ಯವಸ್ಥೆಗಳನ್ನು ಸಬಲೀಕರಣಗೊಳಿಸಲು ತ್ರಿಸ್ಥರದ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಹೊಣೆಗಳೊಂದಿಗೆ (ಕಾರ್ಯಗಳೊಂದಿಗೆ), ಹಣಕಾಸು(ಅನುದಾನ) ಮತ್ತು ಕಾರ್ಯಪಡೆ(ಸಿಬ್ಬಂದಿ)ಗಳನ್ನು ಒದಗಿಸಬೇಕು.

ತ್ರಿಸ್ಥರ ಪಂಚಾಯತ್‌ಗಳು ಸ್ಥಳೀಯ ಸ್ವಯಂ ಸರ್ಕಾರಗಳಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುವಂತೆ ಅಧಿಕಾರಗಳನ್ನು, ಪ್ರಾಧಿಕಾರವನ್ನು, ಪ್ರಕಾರ್ಯಗಳನ್ನು, ಕಾರ್ಯನಿರ್ವಾಹಕರನ್ನು ಮತ್ತು ನಿಧಿಗಳನ್ನು ರಾಜ್ಯವು ಗ್ರಾಮ ಪಂಚಾಯತ್, ತಾಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ಗಳಿಗೆ ಪ್ರಧಾನ ಮಾಡತಕ್ಕದ್ದು. (ಉಲ್ಲೇಖ: ಅಧ್ಯಾಯ 4 ಪ್ರಕರಣ 58, ಅಧ್ಯಾಯ 8 ಪ್ರಕರನ 145, ಅಧ್ಯಾಯ 11 ಪ್ರಕರಣ 184).

ಗ್ರಾಮ ಸ್ವರಾಜ್ ಕಾಯ್ದೆಯಲ್ಲಿ ಹೇಳಿರುವಂತೆ ಗ್ರಾಮ ಪಂಚಾಯತ್‌ಗಳು ಮುಂಚೂಣಿ ಕಾರ್ಯಾಲಯವಾಗಿ ಕಾರ್ಯನಿರ್ವಹಿಸಬೇಕಾದರೆ [ಉಲ್ಲೇಖ: ಅಧ್ಯಾಯ 4 ಪ್ರಕರಣ 58(4)] ಗ್ರಾಮ ಸರ್ಕಾರದ ಸ್ಥಳೀಯ ಸ್ವಯಂ ಆಡಳಿತದ ಸಂಸ್ಥೆಯಾಗಿರತಕ್ಕದ್ದು. ಬಾಪೂಜಿ ಸೇವಾ ಕೇಂದ್ರದ ಮೂಲಕ 100 ಸೇವೆಗಳ ಜವಾಬ್ದಾರಿ ಆಯಾ ಗ್ರಾಮ ಪಂಚಾಯತ್‌ಗಳಿಗೆ ನೀಡಲಾಗಿದೆ. ಇದನ್ನು ಸಮರ್ಪಕವಾಗಿ ಕಾರ್ಯನಿರ್ವಹಿಸಲು ಬಾಪೂಜಿ ಕೇಂದ್ರಕ್ಕೆ ಅಗತ್ಯವಿರುವ ಅತ್ಯುತ್ತಮ ದರ್ಜೆಯ ಕಂಪ್ಯೂಟರ್, ಪ್ರಿಂಟರ್, ಸ್ಕ್ಯಾನರ್, ಪೀಠೋಪಕರಣ ಹಾಗೂ ಹೈಸ್ಪೀಡ್ ಇಂಟರ್‌ನೆಟ್ ಕನೆಕ್ಷನ್, ನಿರ್ವಹಣೆಗೆ ಪ್ರತ್ಯೇಕ ಸಿಬ್ಬಂದಿ ನೇಮಕಾತಿಗೆ ಅನುಮೋದನೆ ನೀಡಬೇಕು.

ಪಂಚಾಯತ್ ರಾಜ್ ಕಾಯ್ದೆಯು ವಿಕೇಂದ್ರೀಕರಣ ವ್ಯವಸ್ಥೆಯನ್ನು ಬಲಗೊಳಿಸುವ ನಿಟ್ಟಿನಲ್ಲಿ ಉತ್ತಮ ಆಶಯ ಮತ್ತು ವಿಧಿಗಳನ್ನು ಹೊಂದಿದ್ದರೂ ಸರ್ಕಾರದ ಇಚ್ಛಾಶಕ್ತಿಯ ಕೊರತೆಯಿಂದಾಗಿ, ವಿವಿಧ ಭಾಗಿದಾರರ ನಿರಾಸಕ್ತಿಯಿಂದಾಗಿ, ಪಂಚಾಯತ್ ರಾಜ್ ಬಲವರ್ಧನೆ ಅನುಷ್ಠಾನದ ಹಂತದಲ್ಲಿ ಹಲವಾರು ಸವಾಲುಗಳನ್ನು ಎದುರಿಸುತ್ತಿದೆ.

ರಾಜ್ಯದ ಗ್ರಾಮೀಣಾಭೀವೃದ್ಧಿ ಸಚಿವರನ್ನು ಮೊದಲ್ಗೊಂಡು ತ್ರಿಸ್ಥರ ಪಂಚಾಯತ್ ರಾಜ್ ಜನಪ್ರತಿನಿಧಿಗಳಿಂದ ಆಯ್ಕೆಗೊಂಡ ವಿಧಾನಪರಿಷತ್ ಸದಸ್ಯರು ಮತ್ತು ರಾಜ್ಯದಲ್ಲಿರುವ ವಿಕೇಂದ್ರೀಕರಣ ವ್ಯವಸ್ಥೆಯ 1ಲಕ್ಷಕ್ಕೂ ಮಿಕ್ಕಿ ಇರುವ ಜನಪ್ರತಿನಿಧಿಗಳು ಪಕ್ಷಾತೀತವಾಗಿ ಒಗ್ಗಟ್ಟಿನ ಪ್ರಯತ್ನ ನಡೆಸಿದರೆ ಮಾತ್ರ ಗ್ರಾಮೀಣಾಭಿವೃದ್ಧಿಯ ಆಶಯಗಳು ಯಥಾವತ್ತಾಗಿ ಅನುಷ್ಠಾನಗೊಳ್ಳಲು ಸಾಧ್ಯ. ಜನಪ್ರತಿನಿಧಿಗಳ ಕ್ರಿಯಾಶೀಲತೆ, ಜನರ ಹಕ್ಕು ಚಲಾಯಿಸುವಿಕೆ ಮಾತ್ರ ಎಲ್ಲಾ ಬದಲಾವಣೆಗಳಿಗೂ ಪೂರಕವಾಗಬಲ್ಲುದು.

## ಸ್ಥಳೀಯಾಡಳಿತ ಸಂಸ್ಥೆಗಳಿಗಿದ್ದ ಅಧಿಕಾರದತ್ತ ಹಿನ್ನೋಟ



**ಶ್ರೀ ಟಿ.ಬಿ.ಶೆಟ್ಟಿ**
**ವಕೀಲರು ಮತ್ತು ಸದಸ್ಯರು,**
**ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ ತಿದ್ದುಪಡಿ ಸಮಿತಿ.**

ಕರ್ನಾಟಕದಲ್ಲಿ 19ನೇ ಶತಮಾನದ ಪ್ರಾರಂಭದಿಂದ ಪಂಚಾಯತ್‌ರಾಜ್ ವ್ಯವಸ್ಥೆಯ ಇತಿಹಾಸ ಅವಲೋಕಿಸಿದರೆ 1918ರಲ್ಲಿ ಜಾರಿಗೆ ಬಂದ **ಮೈಸೂರು ಸ್ಥಳೀಯ ಮಂಡಳಿ ಮತ್ತು ಗ್ರಾಮ ಪಂಚಾಯತ್ ಕಾಯಿದೆ**ಯಿಂದ ಮೊದಲ್ಗೊಂಡು ಈಗಿನ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ ಅಧಿನಿಯಮ 2015ರವರೆಗೆ ಅನೇಕ ಏಳು–ಬೀಳುಗಳೊಂದಿಗೆ ಬದಲಾವಣೆಗಳನ್ನು ಕಂಡಿದೆ. ಕರ್ನಾಟಕ ಏಕೀಕರಣಕ್ಕಿಂತ ಮೊದಲು, ಈಗಿನ ಕರ್ನಾಟಕದ ಭೂಭಾಗಗಳು ಮುಂಬೈ, ಹೈದರಾಬಾದ್, ಮದ್ರಾಸ್ ಹಾಗೂ ಮೈಸೂರು ಪ್ರಾಂತ್ಯಗಳ ಅಡಿಯಲ್ಲಿ ಇದ್ದಾಗ, ಆಯಾಯಾ ಪ್ರಾಂತ್ಯಗಳಲ್ಲಿ ಜಾರಿಯಲ್ಲಿದ್ದ, ಸ್ಥಳೀಯಾಡಳಿತಕ್ಕೆ ಸಂಬಂಧಪಟ್ಟ ಬೇರೆ–ಬೇರೆ ಕಾನೂನುಗಳ ಅಡಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ನಡೆದುಕೊಂಡು ಬಂದಿವೆ. 1956ರಲ್ಲಿ ಭಾಷಾವಾರು ರಾಜ್ಯಗಳ ರಚನೆಯಾದ ಮೇಲೆ ಈಗಿನ ಕರ್ನಾಟಕ ರಾಜ್ಯವು ಮೈಸೂರು ರಾಜ್ಯದ ಹೆಸರಲ್ಲಿ ರಚನೆಯಾಯಿತು. ಆಗ ಹೊಸತಾಗಿ ರಚನೆಯಾದ ಇಡೀ ಮೈಸೂರು ರಾಜ್ಯಕ್ಕೆ ಅನ್ವಯವಾಗುವಂತಹ ಕಾನೂನೊಂದನ್ನು **ಕರ್ನಾಟಕ ಗ್ರಾಮ ಪಂಚಾಯತ್‌ಗಳು ಮತ್ತು ಸ್ಥಳೀಯ ಮಂಡಳಿಗಳ ಕಾಯ್ದೆ 1959** ಎಂಬ ಹೆಸರಲ್ಲಿ ಜಾರಿಗೆ ತರಲಾಯಿತು.

ಕರ್ನಾಟಕ ಗ್ರಾಮ ಪಂಚಾಯತ್‌ಗಳು ಮತ್ತು ಸ್ಥಳೀಯ ಮಂಡಳಿಗಳ ಕಾಯ್ದೆ 1959ರಲ್ಲಿ ನೇರವಾಗಿ ಜನರಿಂದ ಆಯ್ಕೆಯಾಗಿ ರಚನೆಯಾಗುವುದಾಗಿತ್ತು. ಗ್ರಾಮ ಮಟ್ಟದಲ್ಲಿ ಗ್ರಾಮ ಪಂಚಾಯತ್ ಮತ್ತು ತಾಲೂಕು ಮಟ್ಟದಲ್ಲಿ ತಾಲೂಕು ಬೋರ್ಡ್ ಹೀಗೆ ಎರಡು ಹಂತದ ಪಂಚಾಯತ್ ರಾಜ್ ಸಂಸ್ಥೆಗಳನ್ನು ರಚಿಸಲಾಯಿತು. ಅಲ್ಲದೆ ತಾಲೂಕು ಬೋರ್ಡ್‌ಗಳ ಬಜೆಟ್‌ನ್ನು ಮಂಜೂರು ಮಾಡಲು, ತಾಲೂಕು ಬೋರ್ಡ್‌ನ ಕೆಲಸಗಳ ಪರಿಶೀಲನೆ ಮಾಡಲು ಸಂಸದರು, ಶಾಸಕರು, ತಾಲೂಕು ಬೋರ್ಡ್ ಅಧ್ಯಕ್ಷರು, ಅಧಿಕಾರಿಗಳು ಹಾಗೂ ಸರ್ಕಾರವು ನಾಮನಿರ್ದೇಶನ ಮಾಡಿದ ಸದಸ್ಯರನ್ನೊಳಗೊಂಡ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಅಭಿವೃದ್ಧಿ ಮಂಡಳಿಗಳ ರಚನೆ ಮಾಡಲಾಗಿತ್ತು.

1959ರ ಕಾಯಿದೆಯಲ್ಲಿ ರಚನೆಯಾದ ಗ್ರಾಮ ಪಂಚಾಯತ್‌ಗಳು ಮತ್ತು ತಾಲೂಕು ಬೋರ್ಡ್‌ಗಳಿಗೆ ಸಾಕಷ್ಟು ಅಧಿಕಾರಗಳನ್ನು ಮತ್ತು ಜವಾಬ್ದಾರಿಗಳನ್ನು ನೀಡಲಾಗಿತ್ತು. ಅದರಲ್ಲೂ ತಾಲೂಕು ಬೋರ್ಡ್‌ಗಳಿಗೆ ಹೆಚ್ಚಿನ ಅಧಿಕಾರ ನೀಡಲಾಗಿತ್ತು. ಎಷ್ಟರಮಟ್ಟಿಗೆಂದರೆ, ಗ್ರಾಮೀಣ ಆಸ್ಪತ್ರೆಗಳು, ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ತಾಲೂಕು ಬೋರ್ಡ್‌ನ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಆಸ್ಪತ್ರೆಗಳ ವೈದ್ಯರ ಮತ್ತು ಸಿಬ್ಬಂದಿಗಳ ನೇಮಕಾತಿ, ವರ್ಗಾವಣೆ, ವಜಾಗೊಳಿಸುವ ಅಧಿಕಾರ, ಶಿಕ್ಷಕರ ನೇಮಕಾತಿ, ವರ್ಗಾವಣೆ ಮತ್ತು ವಜಾಗೊಳಿಸುವ ಅಧಿಕಾರವನ್ನೂ ಸಹ ತಾಲೂಕು ಬೋರ್ಡ್‌ಗಳಿಗೆ ನೀಡಲಾಗಿತ್ತು. ತನ್ನ ಸಿಬ್ಬಂದಿಗಳ ನೇಮಕಾತಿ ಹಾಗೂ ವಜಾಗೊಳಿಸುವ ಅಧಿಕಾರ ತಾಲೂಕು ಬೋರ್ಡ್‌ಗಳಿಗಿತ್ತು. ತಾಲೂಕು ಬೋರ್ಡ್‌ನಲ್ಲಿ ಸಿಬ್ಬಂದಿ ಕೊರತೆಯಿದ್ದಲ್ಲಿ, ಬೇರೆ ಇಲಾಖೆಗಳಿಂದ ಸಿಬ್ಬಂದಿಯನ್ನು ಅದರ ಕೆಲಸಗಳಿಗಾಗಿ ಸರ್ಕಾರವು ನಿಯೋಜನೆಗೊಳಿಸಬಹುದಾಗಿತ್ತು. ಈ ರೀತಿಯಲ್ಲಿ ನಿಯೋಜನೆಗೊಂಡ ಅಧಿಕಾರಿಯು, ಕರ್ತವ್ಯ ನಿರ್ವಹಣೆಯಲ್ಲಿ ಲೋಪವೆಸಗಿದಲ್ಲಿ, ಅವರ ವಿರುದ್ಧ ದೋಷಾರೋಪಣೆ ಮಾಡಿ, ತನಿಖೆ ನಡೆಸಿ, ಅಧಿಕಾರಿಯ ವಿರುದ್ಧ ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಕಮೀಷನರ್‌ಗೆ ಶಿಫಾರಸ್ಸು ಮಾಡುವಷ್ಟು ಅಧಿಕಾರವನ್ನು ತಾಲೂಕು ಬೋರ್ಡ್‌ಗೆ ನೀಡಲಾಗಿತ್ತು.

ಈಗ ಶಾಸಕರ ನೇತೃತ್ವದ ಸಮಿತಿಗಳು ಮತ್ತು ರಾಜ್ಯ ಸರ್ಕಾರವು ಅಧಿಕಾರಿಗಳ ಮೂಲಕ ಚಲಾಯಿಸುತ್ತಿರುವ ಅನೇಕ ಅಧಿಕಾರಗಳು ತಾಲೂಕು ಬೋರ್ಡ್‌ಗಿತ್ತು. ಈ ಕಾರಣದಿಂದ, ತಾಲೂಕು ಬೋರ್ಡು ಸಶಕ್ತವಾದ ಸ್ಥಳೀಯಾಡಳಿತ ಸಂಸ್ಥೆಯಾಗಿತ್ತು. ಹಾಗಾಗಿ, ಆ ಅವಧಿಯಲ್ಲಿ ತಾಲೂಕು ಬೋರ್ಡ್ ಸದಸ್ಯರಾಗಿ ಆಡಳಿತದ ಅನುಭವ ಹೊಂದಿದ್ದವರು ಅನೇಕರು ನಂತರ ಶಾಸಕರಾಗಿದ್ದರು. ಅದಕ್ಕೆ ಇಂದಿಗೂ ಇರುವ ಉದಾಹರಣೆ ಎಂದರೆ ಮಾಜಿ ಪ್ರಧಾನಿ ಶ್ರೀ ಹೆಚ್. ಡಿ. ದೇವೇಗೌಡರು. ಆಡಳಿತದ ಅನುಭವ ಹೊಂದಲು ತಾಲೂಕು ಬೋರ್ಡ್ ಒಂದು ಪ್ರಮುಖ ವೇದಿಕೆಯಾಗಿದ್ದುದಲ್ಲದೇ, ಆ ಸಮಯದಲ್ಲಿ, ಜನಸಾಮಾನ್ಯರ ಸಂಪರ್ಕ ಹೊಂದಿ, ಜನಾನುರಾಗಿಯಾಗಿ ರಾಜಕೀಯದಲ್ಲಿ ಮುಂದೆ ಹೋಗಲು ಅನಿವಾರ್ಯ ಕೂಡ ಆಗಿತ್ತು.

ಆದರೆ ಇಷ್ಟೆಲ್ಲ ಅಧಿಕಾರ ಹೊಂದಿದ್ದರೂ, ತಾಲೂಕು ಬೋರ್ಡ್ ಮತ್ತು ಆಗಿನ ಗ್ರಾಮ ಪಂಚಾಯತ್‌ಗೆ ಚುನಾವಣೆಯನ್ನು ಅವಧಿ ಮುಕ್ತಾಯದ ಮೊದಲೇ ಮಾಡಬೇಕೆನ್ನುವ ಕಾನೂನಿನ ಬದ್ಧತೆ ಇಲ್ಲದೆ ಇರುವುದರಿಂದ, ಸರ್ಕಾರವು ಆಡಳಿತಾಧಿಕಾರಿಗಳನ್ನು ನೇಮಿಸುವ ಅಧಿಕಾರ ಹೊಂದಿರುವುದರಿಂದ, ಗ್ರಾಮ ಪಂಚಾಯತ್ ಮತ್ತು ತಾಲೂಕು ಬೋರ್ಡ್‌ಗಳಿಗೆ ಸಾಂವಿಧಾನಿಕ ಸ್ಥಾನಮಾನ ಇಲ್ಲದೆ ಇರುವುದರಿಂದ, ಅವು ಸಂಪೂರ್ಣವಾಗಿ ಸರ್ಕಾರದ ಮರ್ಜಿಯಲ್ಲಿ ಇರಬೇಕಾಗಿತ್ತು. ಇದನ್ನು ಹೊರತುಪಡಿಸಿ, ಅಧಿಕಾರದ ದೃಷ್ಟಿಯಲ್ಲಿ ನೋಡಿದರೆ, ಆನಂತರ ಬಂದ 1983ರ ಕಾಯಿದೆಯಲ್ಲಿರುವ ಮಂಡಲ ಪಂಚಾಯತ್ ಹಾಗೂ ಜಿಲ್ಲಾ ಪರಿಷತ್‌ಗಳಿಗಾಗಲಿ, 1993ರ ಕಾಯಿದೆಯಲ್ಲಿರುವ ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ಗಾಗಲೀ, ತಾಲೂಕು ಬೋರ್ಡ್‌ಗೆ ಇದ್ದಷ್ಟು ಅಧಿಕಾರ ಇರಲಿಲ್ಲ.

ತನ್ಮಧ್ಯೆ, ಸಂವಿಧಾನಕ್ಕೆ ತಂದ 73ನೇ ತಿದ್ದುಪಡಿಯಲ್ಲಿ ಮೂರು ಹಂತದ ಪಂಚಾಯತ್‌ಗಳನ್ನು ರಚನೆ ಮಾಡುವುದು, ಕಾಲಕಾಲಕ್ಕೆ ಸರಿಯಾಗಿ ಚುನಾವಣೆ ನಡೆಸುವುದು ಸಾಂವಿಧಾನಿಕ ಬದ್ಧತೆಯಾಗಿರುತ್ತದೆ. ಆದರೆ 73ನೇ ತಿದ್ದುಪಡಿಯ ನಂತರ ಬಂದ 1993ರ ಕಾಯಿದೆಯ ನಂತರವೂ ಕೂಡ ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಅವಧಿಯ ಮೊದಲೇ ಚುನಾವಣೆ ನಡೆಸಲು ಆಯಾಯಾ ಕಾಲದಲ್ಲಿದ್ದ ಸರ್ಕಾರಗಳು ವಿಫಲವಾಗಿ ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯದ ಕಟ್ಟುನಿಟ್ಟಿನ ಆದೇಶದ ನಂತರವೇ ಚುನಾವಣೆಗಳನ್ನು ನಡೆಸಿದ್ದನ್ನು ನೋಡಿದ್ದೇವೆ. 73ನೇ ಸಂವಿಧಾನ ತಿದ್ದುಪಡಿಯಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಅವುಗಳು ಸ್ವಯಂಸರ್ಕಾರದ ರೀತಿಯಲ್ಲಿ ಕೆಲಸ ಮಾಡಲು ಅಗತ್ಯವಿರುವ ಅಧಿಕಾರ ಮತ್ತು ಸಂಪನ್ಮೂಲಗಳನ್ನು ರಾಜ್ಯ ಸರ್ಕಾರವು ನೀಡಬೇಕೆಂದು ಹೇಳಲಾಗಿದೆ. ಈವರೆಗೂ ರಾಜ್ಯ ಸರ್ಕಾರವು ಆ ರೀತಿ ನಡೆದುಕೊಳ್ಳದೆ ಇರುವುದರಿಂದ, ಈ ಕುರಿತು ವಿಧಾನ ಮಂಡಲದಲ್ಲಿ ಗಂಭೀರ ಚರ್ಚೆ ನಡೆದಾಗ ಸರ್ಕಾರವು ಶ್ರೀ ರಮೇಶ್‌ಕುಮಾರ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚಿಸಿ ಪಂಚಾಯತ್ ರಾಜ್ ಕಾಯಿದೆಗೆ ಏನೇನು ಬದಲಾವಣೆ ತರಬೇಕೆಂದು ಶಿಫಾರಸ್ಸು ಮಾಡಲು ಕೇಳಿಕೊಂಡಿತು. ಆ ಪ್ರಕಾರ ಸಮಿತಿಯು ಸಾಕಷ್ಟು ಅಧ್ಯಯನ ಮಾಡಿ, ಅನೇಕ ಶಿಫಾರಸ್ಸುಗಳನ್ನೊಳಗೊಂಡ ವರದಿಯನ್ನು ಸರ್ಕಾರಕ್ಕೆ ನೀಡಿತು. ಸರ್ಕಾರವು ಅವುಗಳಲ್ಲಿ ಕೆಲವನ್ನು ಒಪ್ಪಿ, ಪಂಚಾಯತ್ ರಾಜ್ ಕಾಯಿದೆಗೆ ಸಾಕಷ್ಟು ತಿದ್ದುಪಡಿಗಳನ್ನು ತಂದರೂ, ಅನುಷ್ಠಾನ ಪ್ರಕ್ರಿಯೆಯಲ್ಲಿ ಎಡವಿ, ಕಾನೂನಿನಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿದರೂ, ಪಂಚಾಯತ್‌ರಾಜ್ ಸಂಸ್ಥೆಗಳು ಸ್ವಯಂಸರ್ಕಾರದ ರೀತಿಯಲ್ಲಿ ಕೆಲಸ ಮಾಡಲು ಬೇಕಾದ ಆಡಳಿತಾತ್ಮಕ ಅಧಿಕಾರ ಮತ್ತು ಹಣಕಾಸನ್ನು ಒದಗಿಸಲು ವಿಫಲವಾಗಿದೆ.

ಈ ಹಿನ್ನೆಲೆಯಲ್ಲಿ ದಿನಾಂಕ: 23 ಹಾಗೂ 24 ಫೆಬ್ರವರಿ 2018 ರಂದು ಉಡುಪಿಯಲ್ಲಿ ನಡೆಯುವ ಚಿಂತನ–ಮಂತನ ಕಾರ್ಯಕ್ರಮವು ಪಂಚಾಯತ್ ರಾಜ್ ಸಂಸ್ಥೆಗಳನ್ನು ಬಲಪಡಿಸಲು ಬೇಕಾಗುವ ವಾತಾವರಣ ನಿರ್ಮಿಸಲು ಸಹಕಾರಿ ಆಗಬಹುದೆಂದು ನಿರೀಕ್ಷಿಸಲಾಗಿದೆ.

# ಗ್ರಾಮವೂ ಸ್ವಯಮಾಡಳಿತದ ಘಟಕಗಳಾಗಲಿ



**ಬಿ. ದಾಮೋದರ ಆಚಾರ್ಯ**
**ಸಹ–ಸಂಚಾಲಕರು, ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನ ಹಾಗೂ ಕಾರ್ಯಕಾರಿ ನಿರ್ದೇಶಕರು, ದಿ ಕನ್ಸರ್ನ್ಡ ಫಾರ್ ವರ್ಕಿಂಗ್ ಚಿಲ್ಡ್ರನ್**

**"................. ಗ್ರಾಮ ಸ್ವರಾಜ್ಯವನ್ನು ಸ್ಥಾಪಿಸಿ – ಪ್ರತಿಯೊಂದು ಗ್ರಾಮವೂ ಸ್ವಯಮಾಡಳಿತದ ಘಟಕಗಳಾಗಲಿ ಮತ್ತು ತಮ್ಮ ಗ್ರಾಮದಲ್ಲಿನ ನಿವಾಸಿಗಳ ಅಗತ್ಯತೆಗಳನ್ನು ಪೂರೈಸುವಲ್ಲಿ ಸ್ವಾವಲಂಬಿಗಳಾಗಲಿ" – ಗಾಂಧೀಜಿ.**

ಸ್ವಾತಂತ್ರ್ಯ ಹೋರಾಟದಲ್ಲಿ ನಮ್ಮ ದೇಶ ಕಟ್ಟುವ ಬಗ್ಗೆ ಒಂದು ಸ್ಪಷ್ಟ ಆಲೋಚನೆಯನ್ನು ಗಾಂಧೀಜಿ ಹೊಂದಿದ್ದರು. ಸ್ಥಳೀಯಾಡಳಿತ ವ್ಯವಸ್ಥೆಗೆ ನಮ್ಮ ದೇಶದಲ್ಲಿ ವಿಶೇಷ ಚರಿತ್ರೆ, ಮಹತ್ವವಿದೆ. ಇಂದು ನಾವು ಪಂಚಾಯತ್ ಎನ್ನುವ ವ್ಯವಸ್ಥೆಯು ಪ್ರಾಚೀನ ಕಾಲದಲ್ಲಿದ್ದ ಐದು ಜನರಿಂದ ನಡೆಯುತ್ತಿದ್ದ ಗ್ರಾಮಾಡಳಿತ ವ್ಯವಸ್ಥೆಯ ಆಲೋಚನೆಯಿಂದ ಬಂದಿದ್ದು. ಪಂಚ ಜನರ ಆಡಳಿತ ಪಂಚಾಯತ್. ಪಾಟೀಲ, ಗೌಡ, ಶ್ಯಾನುಭೋಗ, ಕುಲಕರ್ಣಿ ಹಾಗೂ ಪ್ರಭು – ಇವರೆಲ್ಲಾ ಹಿಂದಿನ ಕಾಲದ ಪಂಚಾಯತ್‌ನ ಪಂಚರು. ಅವರ ಆಯ್ಕೆ, ಅಧಿಕಾರ ವಂಶಪಾರಂಪರ್ಯವಾಗಿರುತ್ತಿತ್ತೇ ವಿನಃ ಎಲ್ಲಾ ಜನರು ಚುನಾವಣೆಯ ಮೂಲಕ ಮಾಡುವ ಆಯ್ಕೆಯಿಂದಲ್ಲ. ಮೇಲ್ವರ್ಗದ ಗಂಡಸರು, ಹಣವಂತರು, ಬಲವುಳ್ಳವರು ಮಾತ್ರ ಪಂಚರಾಗಲು ಸಾಧ್ಯವಿತ್ತು. ಈ ವ್ಯವಸ್ಥೆಯೂ ಸಹ ಕಾಲಕಾಲಕ್ಕೆ ಬದಲಾವಣೆ ಕಂಡುಕೊಂಡಿದ್ದಿದೆ. ಮೈಸೂರು ಪ್ರಾಂತ್ಯದ ದಿವಾನರು ಆಡಳಿತವು ತಳಮಟ್ಟದಿಂದಾಗಬೇಕು ಎಂದು ನಂಬಿದ್ದರು. 1870ರಲ್ಲಿ 'ಮೇಯೋ' ಎನ್ನುವವರು ಸ್ಥಳೀಯ ಸಂಸ್ಥೆಗೆ ಮನ್ನಣೆ ನೀಡಿದರೆ, 1882ರಲ್ಲಿ ಲಾರ್ಡ್ ರಿಪ್ಪನ್ ಪಂಚಾಯತ್‌ನಲ್ಲಿ ಚುನಾಯಿತ ಪ್ರತಿನಿಧಿಗಳು ಪಂಚರಾಗುವಂತೆ ಮಾಡಿದರು. ನಮ್ಮಲ್ಲಿನ ಒಳ್ಳೆಯ ಆಡಳಿತ ವ್ಯವಸ್ಥೆಯನ್ನು ಮೈಸೂರು ಪ್ರಾಂತ್ಯದ ದಿವಾನರು, ಬ್ರಿಟಿಷರು ಗಮನಿಸಿ ಅದಕ್ಕೆ ಶಕ್ತಿ ತುಂಬಿದ್ದು ನಮ್ಮ ಪ್ರಾಚೀನ ಆಡಳಿತ ವ್ಯವಸ್ಥೆಗೆ ಸಿಕ್ಕಿದ ಮನ್ನಣೆ ಎನ್ನಲಡ್ಡಿಯಿಲ್ಲ.

ಸ್ವಾತಂತ್ರ್ಯಾನಂತರ ನಮ್ಮ ಆಡಳಿತ ವ್ಯವಸ್ಥೆ ರೂಪಿಸುವಾಗ ಸ್ಥಳೀಯಾಡಳಿತದ ಬಗ್ಗೆ ವಿಶೇಷವಾಗಿ 'ಗ್ರಾಮ ಸ್ವರಾಜ್' ಬಗ್ಗೆ ಗಾಂಧೀಜಿಯವರ ಒತ್ತಾಯ ಬಹಳವಿತ್ತು. ಪ್ರಜಾಪ್ರಭುತ್ವದ ನಿಜ ಆಶಯವೆಂದರೆ ತನ್ನ ಕುರಿತಾದ ನೀತಿ, ನಿರ್ಧಾರ, ಯೋಜನೆ, ಅಭಿವೃದ್ಧಿಯಲ್ಲಿ ಪ್ರತಿಯೊಬ್ಬ ಪ್ರಜೆಗೂ ಜಾತಿ, ಮತ, ಧರ್ಮ, ಭಾಷೆ, ವರ್ಗ, ಪ್ರದೇಶಗಳ ಹಂಗಿಲ್ಲದೇ ಭಾಗವಹಿಸುವ ಹಕ್ಕು–ಕರ್ತವ್ಯಗಳಿರುವುದೇ ಆಗಿದೆ. ನಮ್ಮ ಸಂವಿಧಾನವು ಮುಖ್ಯವಾಗಿ ಪ್ರತಿ ವ್ಯಕ್ತಿಗೂ ಸ್ವಾಭಿಮಾನದ, ಗೌರವದ ತನ್ನ ಆಯ್ಕೆಯ ಬದುಕನ್ನು ಬದುಕುವ ಹಕ್ಕು ಮತ್ತು ಜವಾಬ್ದಾರಿಯನ್ನು ನೀಡಿದೆ. ಸ್ವಾತಂತ್ರ್ಯಪೂರ್ವ ಹಾಗೂ ಪರದಾಸ್ಯದ ಪೂರ್ವದಲ್ಲಿರುವಾಗ ನಾವು, ಜನರನ್ನು ಅಥವಾ ಸಮುದಾಯಗಳನ್ನು ಗುರುತಿಸಿದ ರೀತಿಗಿಂತ ತೀರಾ ಭಿನ್ನವಾಗಿ ನಮ್ಮ ಸಂವಿಧಾನ ಅದನ್ನು ನೋಡಿದೆ ಎನ್ನಬಹುದು. ಇಂದು ಈ ದೇಶದಲ್ಲಿ ಪ್ರಜಾಪ್ರಭುತ್ವದ ನೆಲೆಯಲ್ಲಿ ವಿವಿಧ ವರ್ಗ–ಸಮೂಹಗಳು ಅಧಿಕಾರದಲ್ಲಿ ಭಾಗಿಯಾಗಿದ್ದಾವೆಂದರೆ ಅದಕ್ಕೆ ನಿಜವಾದ ಕಾರಣ ನಮ್ಮ ಸಂವಿಧಾನ.

ಇಷ್ಟೆಲ್ಲಾ ಇದ್ದರೂ ದೇಶದಾದ್ಯಂತ ಗ್ರಾಮಾಡಳಿತ ಒಂದೇ ತರಹದಲ್ಲಿ ಇರಲಿಲ್ಲ. ಪಂಚಾಯತ್‌ಗಳಿಗೆ ಒಂದು ಸ್ಥಿರತೆ, ನಿರಂತರತೆ, ಸ್ಪಷ್ಟತೆಗಳಿರಲಿಲ್ಲ. 1993ರವರೆಗೆ ಹಲವು ರೀತಿಯ ಪ್ರಯೋಗಗಳು, ಅಡೆ–ತಡೆಗಳು, ಏಳು–ಬೀಳುಗಳನ್ನು ಈ ಗ್ರಾಮಾಡಳಿತ ಕಂಡಿತು. ದೇಶದ ಕೆಲವು ರಾಜ್ಯಗಳಾದ ಗುಜರಾತ್, ಪಶ್ಚಿಮ ಬಂಗಾಳ, ಕೇರಳಗಳಲ್ಲಿ ಸಂವಿಧಾನದಲ್ಲಿ ಗ್ರಾಮಾಡಳಿತದ ಬಗ್ಗೆ ಹೆಚ್ಚು ಸ್ಪಷ್ಟತೆ ಇಲ್ಲದಿದ್ದರೂ, ತಮ್ಮ ರಾಜ್ಯಗಳಲ್ಲೇ ಪಂಚಾಯತ್ ಕಾಯಿದೆಯನ್ನು ರಚಿಸಿ, ಗ್ರಾಮಾಡಳಿತ ವ್ಯವಸ್ಥೆ ರೂಪಿಸಿದ್ದರು. ಎಂಬತ್ತರ ದಶಕದಲ್ಲಿ ಕರ್ನಾಟಕದಲ್ಲಿ ರಾಜಕೀಯ ಬದಲಾವಣೆಯ ಗಾಳಿ ಬೀಸತೊಡಗಿತು. 1983ರಲ್ಲಿ ದಿ. ಅಬ್ದುಲ್ ನಝೀರ್ ಸಾಬ್ ಅವರು ಕರ್ನಾಟಕದಲ್ಲಿ ಆಡಳಿತ ವಿಕೇಂದ್ರೀಕರಣದ ಕನಸು ಕಂಡರು. 'ಜನರ ಕೈಗೆ ಅಧಿಕಾರ' ಎನ್ನುವ ನೆಲೆಯಲ್ಲಿ 1983ರಲ್ಲಿ ಕಾಯ್ದೆ ರಚಿಸಿದರು. ನಿರಂತರ ಪ್ರಯತ್ನ, ಅಂದಿನ ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗಡೆಯವರ ದೃಢ ಬೆಂಬಲ, ಶ್ರೀ ನಝೀರ್ ಸಾಬ್ ಅವರ




ಹೋರಾಟದ ಫಲವಾಗಿ 1985ರಲ್ಲಿ ಈ ಕಾಯ್ದೆ ಜಾರಿಗೆ ಬಂದು 1987ರಲ್ಲಿ ಪ್ರಥಮ ಚುನಾವಣೆ ನಡೆಯಿತು. ಗ್ರಾಮ ಪಂಚಾಯತ್ ಸ್ಥಾಪನೆಯಾದಾಗ ಮಾತ್ರ ಗ್ರಾಮ ಸ್ವರಾಜ್ಯಕ್ಕೆ ನಿಜ ಅರ್ಥ ಕಂಡುಕೊಳ್ಳಲು ಸಾಧ್ಯ ಎನ್ನುವ ವಿಷಯವನ್ನು ಇಡೀ ರಾಷ್ಟ್ರ ಗಮನಿಸಿತು. ಇದು ದೇಶದಲ್ಲಿ ಹೊಸ ಸಂಚಲನ ಮೂಡಿಸಿತು.

ಸ್ವಾತಂತ್ರ್ಯಾನಂತರ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ತರಬೇಕೆಂದು ಹಲವಾರು ಅಧ್ಯಯನಗಳು, ಸಮಿತಿಗಳು ರಚನೆಗೊಂಡವು. 1987ರ ನಂತರ ಇದು ದೇಶದಾದ್ಯಂತ ಚರ್ಚೆಯ ವಿಷಯವಾಯಿತು. ಕರ್ನಾಟಕ ರಾಜ್ಯವು ಪ್ರಜಾಪ್ರಭುತ್ವದ ವಿಕೇಂದ್ರೀಕರಣದಲ್ಲಿ ಮುಂಚೂಣಿ ನೆಲೆಯಲ್ಲಿ ನಿಂತಿತು. ಕರ್ನಾಟಕದಲ್ಲಿ ಹೊಸ ರಾಜಕೀಯ ವಾತಾವರಣ ಸೃಷ್ಟಿಯಾಯಿತು. ಪ್ರತಿ ಹಳ್ಳಿಯೂ ಅಭಿವೃದ್ಧಿಯ ಘಟಕಗಳಾಗಿ, ಪ್ರತಿ ಪ್ರಜೆಯೂ ಅದರಲ್ಲಿ ಸಮಾನ ಪಾಲುದಾರರಾಗಬೇಕೆಂಬ ಭಾವನೆ ಎಲ್ಲರಲ್ಲಿಯೂ ಮೂಡಿತು. ಇಲ್ಲಿಯವರೆಗೆ ಗ್ರಾಮಸರ್ಕಾರದ ಸಾಧನೆ ಮತ್ತು ಹೊಣೆಗಾರಿಕೆಯು ಆಯಾ ರಾಜ್ಯ ಸರ್ಕಾರಗಳ ಆಡಳಿತ ವ್ಯವಸ್ಥೆಯ ರಾಜಕೀಯ ಇಚ್ಛಾಶಕ್ತಿ ಮತ್ತು ಬದ್ಧತೆಯ ಮೇಲೆ ಅವಲಂಬಿತವಾಗಿತ್ತು. ದೇಶದಾದ್ಯಂತ ಇದಕ್ಕೊಂದು ಸ್ಪಷ್ಟ ರೂಪ ನೀಡಬೇಕು, ಭಾರತದ ಗ್ರಾಮರಾಜ್ಯಗಳು ನಿತ್ಯ, ನಿರಂತರ, ಸ್ಪಷ್ಟತೆ ಮತ್ತು ನಿಖರತೆಯಿಂದ ನಡೆಯುವ ಅಗತ್ಯತೆ ಹಾಗೂ ಅದಕ್ಕೆ ಸಂವಿಧಾನದ ಬದ್ಧತೆ ನೀಡಬೇಕೆಂದು ಅಂದಿನ ಕೇಂದ್ರದ ಶ್ರೀ ರಾಜೀವಗಾಂಧಿಯವರ ಸರ್ಕಾರ ನಿರ್ಧರಿಸಿತು. ಇಲ್ಲಿಯವರೆಗೆ ಪಂಚಾಯತ್ ರಾಜ್ ಸಂಸ್ಥೆಗಳು ಆಯಾ ರಾಜ್ಯ ಸರ್ಕಾರಗಳ ಮರ್ಜಿ ಅನುಸರಿಸಿ ಹುಟ್ಟು–ಸಾವಿನ ನಡುವೆ ಹೊಯ್ದಾಡುವ ಪರಿಸ್ಥಿತಿಯಿಂದ ಪುನರುಜ್ಜೀವನ ನೀಡಲು ಸಂವಿಧಾನಾತ್ಮಕ ಅಧಿಕಾರ, ಜವಾಬ್ದಾರಿ, ಬದ್ಧತೆ ನೀಡಲು ಅವರು ಬಯಸಿದರು. ಈ ಸಂವಿಧಾನ ತಿದ್ದುಪಡಿಯನ್ನು ಲೋಕಸಭೆಯಲ್ಲಿ ಮಂಡನೆ ಮಾಡುತ್ತಾ ಅಂದಿನ ಪ್ರಧಾನಿ ರಾಜೀವ ಗಾಂಧಿ ಹೇಳಿದ ಮಾತು ಈ ದೇಶದ ಅಂದಿನ ಆಡಳಿತ ವ್ಯವಸ್ಥೆಗೆ ಹಿಡಿದ ಕನ್ನಡಿಯಂತಿತ್ತು. "ರಾಜಕೀಯ ಅಧಿಕಾರ ಇಲ್ಲದ ತಳಮಟ್ಟದ ಆಡಳಿತ ವ್ಯವಸ್ಥೆ ಅಂದರೆ ಉಪ್ಪಿಲ್ಲದ ಊಟವಿದ್ದಂತೆ ಎಂಬುದನ್ನು ಅರಿತೆವು. ನಮ್ಮ ಜಿಲ್ಲಾಡಳಿತಗಳು ಎಷ್ಟೇ ಒಳ್ಳೆಯ ಉದ್ದೇಶದಿಂದ ಇದ್ದರೂ ಸಹ, ಪರಿಣಾಮಕಾರಿಯಾದ ಚುನಾಯಿತ ಪ್ರತಿನಿಧಿಗಳು ಇಲ್ಲದಿದ್ದರೆ, ಜನರ ಮತ್ತು ಆಡಳಿತಶಾಹಿಯ ನಡುವಿನ ಕಂದಕವನ್ನು ಮುಚ್ಚಲಾಗದು ಎಂದು ಅರಿತೆವು."

ಲೋಕಸಭೆಯಲ್ಲಿ ಅಂಗೀಕಾರಗೊಂಡ ಈ ಸಂವಿಧಾನ ತಿದ್ದುಪಡಿ ಮಸೂದೆಯು ರಾಜ್ಯ ಸಭೆಯಲ್ಲಿ ಒಂದು ಮತದ ಅಂತರದಲ್ಲಿ ಸೋತಿತು. ಇದು ನಿಜವಾಗಿಯೂ ಪ್ರಜಾಪ್ರಭುತ್ವದ ಸೋಲಾಗಿತ್ತು. ನಂತರ 1993ರಲ್ಲಿ ಶ್ರೀ ನರಸಿಂಹ ರಾವ್ ಸರ್ಕಾರವು ಸಂಸದರ ಒತ್ತಾಯ–ಒತ್ತಡಗಳಿಗೆ ಮಣಿದು, ಕೆಲವು ಬದಲಾವಣೆಗಳನ್ನು ಮಾಡಿ ವಿಧೇಯಕ ಮಂಡನೆ ಮಾಡಿತು. ಅದುವೇ ಸಂವಿಧಾನದ 73ನೇ ತಿದ್ದುಪಡಿ. ಈ 73ನೇ ತಿದ್ದುಪಡಿಯು ಪೂರ್ಣವಾಗಿ ತ್ರಿಸ್ತರ ಪಂಚಾಯತ್ ವ್ಯವಸ್ಥೆಯ ಗ್ರಾಮೀಣಾಡಳಿತಕ್ಕೆ ಸಂಬಂಧಿಸಿದ್ದರೆ, 74ನೇ ತಿದ್ದುಪಡಿಯು ನಗರ, ಪಟ್ಟಣ, ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಪಟ್ಟಿದೆ.

ಸಂವಿಧಾನವು ನೀಡಿದ ಈ ನೆಲೆಯಲ್ಲಿಯೇ ಎಲ್ಲಾ ರಾಜ್ಯಗಳಲ್ಲಿ ಸಂವಿಧಾನಬದ್ಧವಾಗಿ ಜನರ ಕೈಗೆ ಅಧಿಕಾರ ನೀಡುವ ಸ್ಥಳೀಯ ಆಡಳಿತ ವ್ಯವಸ್ಥೆಯಾಗಿ ಗ್ರಾಮ ಪಂಚಾಯತ್ ಅಸ್ತಿತ್ವಕ್ಕೆ ಬಂತು. ಕರ್ನಾಟಕ ರಾಜ್ಯದ ಪಂಚಾಯತ್ ರಾಜ್ ಕಾಯ್ದೆಯು ಮಾದರಿಯಾಗಿ 73ನೇ ಸಂವಿಧಾನ ತಿದ್ದುಪಡಿಯ ನಂತರ ಇಡೀ ದೇಶದಲ್ಲಿಯೇ ಹೊಸ ಪಂಚಾಯತ್ ರಾಜ್ ಕಾಯ್ದೆ ಜಾರಿಯಾಯಿತು. ಹೀಗೆ ದೇಶದಲ್ಲಿಯೇ ಮುಂಚೂಣಿಯಲ್ಲಿದ್ದ ಕರ್ನಾಟಕದಲ್ಲಿ ಇದರ ನಡೆ ಸುಲಭದ್ದಾಗಿರಲಿಲ್ಲ. ಸ್ಥಳೀಯಾಡಳಿತ ಸಂಸ್ಥೆಗಳ ಅದರಲ್ಲೂ ವಿಶೇಷವಾಗಿ ಗ್ರಾಮ ಪಂಚಾಯತ್‌ಗಳ ಹಾಗೂ ಗ್ರಾಮ ಸರ್ಕಾರದ ಮುಖ್ಯ ಭಾಗವಾದ ಗ್ರಾಮ ಸಭೆಯ ಅಧಿಕಾರ ಕಸಿಯುವ ಕೆಲಸ ಪ್ರಾರಂಭವಾಯಿತು. ಉದಾ: ಫಲಾನುಭವಿಗಳ ಆಯ್ಕೆಯ ಅಧಿಕಾರ ಕಸಿತ, ಗ್ರಾಮ ಸಭೆ ತಯಾರಿಸಿದ ಯೋಜನೆಗಳ ಬಗ್ಗೆ ನಿರ್ಲಕ್ಷ್ಯತನ, ಪಂಚಾಯತ್‌ಗೆ ಸಂವಿಧಾನಬದ್ಧವಾಗಿ ಹಂಚಿಕೆಯಾಗಬೇಕಾದ ವಿಷಯ, ಜವಾಬ್ದಾರಿಗಳನ್ನು ಹಂಚಿಕೆ ಮಾಡದೇ ಇದ್ದದ್ದು, ವಿವಿಧ ಇಲಾಖೆಯವರು ಈ ಸ್ಥಳೀಯ ಸರ್ಕಾರವನ್ನು ಬದಿಗೊತ್ತಿ ತಾವೇ ಕಾರ್ಯಕ್ರಮ ಅನುಷ್ಠಾನಕ್ಕೆ ಮುಂದಾಗಿದ್ದು, ಶಾಸನಾತ್ಮಕ ಅನುದಾನಗಳನ್ನು ಕಾಲ–ಕಾಲಕ್ಕೆ ಪಂಚಾಯತ್‌ಗಳಿಗೆ ನೀಡದೇ ಇದ್ದುದ್ದು, 'ಎಲ್ಲಿ ಯಾವ ಕೆಲಸವೋ ಅಲ್ಲೇ ನಿರ್ಧಾರ, ಅಲ್ಲೇ ಯೋಜನೆ, ಅಲ್ಲೇ ಅನುಷ್ಠಾನ' ಎನ್ನುವ ನೀತಿಗೆ ವ್ಯತಿರಿಕ್ತವಾದ ವ್ಯವಸ್ಥೆ, ಕಾಲ–ಕಾಲಕ್ಕೆ ಸರಿಯಾಗಿ ಚುನಾವಣೆ ನಡೆಸದೇ ಚುನಾಯಿತ ಪ್ರತಿನಿಧಿಗಳ ಬದಲಿಗೆ ಅಧಿಕಾರಿಗಳ ನೇಮಕ – ಹೀಗೆ ಕಳೆದ ಕಾಲು ಶತಮಾನದಲ್ಲಿ ಸ್ಥಳೀಯಾಡಳಿತ ಎನ್ನುವುದು ಚಿಗುರೊಡೆಯುತ್ತಿರುವಾಗಲೇ ಚಿವುಟುವ ಪ್ರಕ್ರಿಯೆ ನಿರಂತರವಾಗಿ ನಡೆಯಿತು. ಆದರೆ ಇಷ್ಟೆಲ್ಲಾ ಕಹಿ ಅನುಭವಗಳಿದ್ದರೂ, ಪ್ರಜಾಪ್ರಭುತ್ವದ ಬಗ್ಗೆ ಬದ್ಧತೆ ಇರುವ ವ್ಯಕ್ತಿಗಳ, ಸಂಘಟನೆಗಳ ನಿತ್ಯ–ನಿರಂತರ ಪ್ರಯತ್ನಗಳಿಂದ ಕರ್ನಾಟಕದಲ್ಲಿ ಮತ್ತೊಮ್ಮೆ ಕಾಯ್ದೆ ತಿದ್ದುಪಡಿಗೊಂಡು ಮಗದೊಮ್ಮೆ ಭರವಸೆ ಚಿಗುರಿಸಿದೆ.

ಸಂವಿಧಾನದ 73ನೇ ತಿದ್ದುಪಡಿಯ 25ನೇ ವರ್ಷದ ಸಂದರ್ಭದಲ್ಲಿ ಅದರ ಆಚರಣೆ ಮಾತ್ರವಲ್ಲ, ಮುಂದಿನ ನಡೆ ಹೇಗೆ ಎನ್ನುವ ಬಗ್ಗೆ ಚಿಂತನ–ಮಂಥನ ನಡೆಯಬೇಕಗಿದೆ. ದೇಶದಲ್ಲಿ ಅಲ್ಲಲ್ಲಿ ಈಗಾಗಲೇ ಈ ಬಗ್ಗೆ ಚರ್ಚೆ ಪ್ರಾರಂಭವಾಗಿದೆ. ಕರ್ನಾಟಕದಲ್ಲೂ ಅಂತಹ ಒಂದು ಸಣ್ಣ ಪ್ರಯತ್ನವು ಫೆಬ್ರವರಿ 23, 24ರಂದು ಉಡುಪಿ ಜಿಲ್ಲೆಯಲ್ಲಿ ನಡೆಯಲಿದೆ. ಪ್ರಜಾಪ್ರಭುತ್ವದ ರಕ್ಷಣೆಯಲ್ಲಿ ಸಣ್ಣದಾದರೂ ಇದೊಂದು ಉತ್ತಮ ಪ್ರಯತ್ನ.